ಬಾಲ್ಯದ ಹಸಿವು, ಅವಮಾನ, ನೀರಡಿಕೆ, ಬಡತನ, ಬೈಗುಳ, ಕೀಳರಿಮೆ ಎಲ್ಲ ಈ ಹುಚ್ಚುಹೊಳೆಯಲ್ಲಿ ಮೆಲ್ಲಮೆಲ್ಲನೆ ಕರಗತೊಡಗಿದ್ದವು. ನಾಜೀಮಾಳನ್ನು ನೋಡಬೇಕು, ಹತ್ತಿರ ಸುಳಿದಾಗ ಅವಳನ್ನು ಆಘ್ರಾಣಿಸಬೇಕು, ಸ್ವರ್ಗ ಸುಖವನ್ನೇ ನೀಡುವ ಅವಳ ಚೂಡಿದಾರ್ ವೇಲ್ ಅಕಸ್ಮಾತ್ ತಗುಲಬೇಕು... ಇತ್ಯಾದಿ ಆಸೆಗಳಲ್ಲಿ ಬಾಲ್ಯಕ್ಕೆ ಬಂದುಬಿದ್ದ ವಿಘ್ನಗಳನ್ನು ಸಹಿಸಿಕೊಂಡ.

ರವಿಕಾಂತ ಜಾಣನಲ್ಲದಿದ್ದರೂ ಒಳ್ಳೆಯ ವಿದ್ಯಾರ್ಥಿಯಾಗಿದ್ದ. ಓದಿ, ಬೆಳೆದು ಒಳ್ಳೆಯ ಕೆಲಸ ಹಿಡಿದು ಮುಂದೆ ಬರಬೇಕೆಂದು ನಿರ್ಧರಿಸಿದ್ದ. ಇಪ್ಪತ್ತರವರೆಗೂ ಮಗ್ಗಿ ಕಲಿತಿದ್ದ, ಹಿಂದೆ ಬೀಳುವ ಇಂಗ್ಲಿಷಿನಲ್ಲೂ ಸ್ಪೆಲ್ಲಿಂಗುಗಳನ್ನು ಗಟ್ಟುಮಾಡಿ ಒಪ್ಪಿಸಲು ಶುರುಮಾಡಿದ್ದ. ಹೆಚ್ಚು ಸಮಯವೆಲ್ಲ ಶಾಲೆಗೆ ಮೀಸಲು. 'ಗುಡ್ ಬಾಯ್' ಆಗಲೆತ್ನಿಸುತ್ತ ಬುಡ್ಡಿಬೆಳಕಲ್ಲಿ ಹಾಳೆ ತಿರುವಿಹಾಕತೊಡಗಿದ. 'ನಾಜೀಮಾ' ಎಂಬ ಸೆಳೆತ ಇನ್ನೂ ಮಾಸದ ದಿನಗಳವು. ಶಾಲೆ ಪ್ರಪಂಚವೇ ಆಗುವ ಹೊತ್ತಿಗೆ ಒಂದು ದಿನ ವಿಜ್ಞಾನದ ಪಿರಿಯಡ್ಡಿನಲ್ಲಿ ಮೀನಿನ ಚಿತ್ರ ಬರೆದು ಮುಗಿಸುವ ಹೊತ್ತಿಗೆ–

'ಲೋ ಕಾಂತೇಸಾ...' ಅವನಮ್ಮನ ಗೊಗ್ಗರು ದನಿ!

ನಮ್ಮಮ್ಮ ಯಾಕ್ ಬಂದ್ಲು ಸ್ಕೂಲ್ ಹತ್ರ? ಸೀಮೆಣ್ಣೆಗೆ ಕ್ಯೂ ನಿಲ್ಲು ಬಾ ಅಂತಾನೊ, ನೀರು ಬಿಟ್ಟಾರೆ ಪಕ್ಕದಮನೆ ಸೌಕಾರ್ರಮನೆ ತೊಟ್ಟಿಯೊಳಗೆ ಇಳಿ ಬಾ ಅಂತನೊ, ಯಾರದೋ ಮರ ಬಿದ್ದೈತೆ ಸೌದೆಕಟ್ಟಿಗೆ ತಗಂಡೋಗಣ ಬಾ ಅಂತನೋ ಕರೆಯಾಕೆ ಬಂದಿರಬೇಕು... ಸಿಕ್ಕಾಪಟ್ಟೆ ಪ್ರಶ್ನೆಗಳು ಒಮ್ಮೇಲೆ ದಾಳಿಯಿಟ್ಟಿದ್ದವು. ನಿಂತ... ಪಾಟಿಕೈಚೀಲ ಹಿಡಿದ... ತನ್ನನ್ನೇ ದಿಟ್ಟಿಸುತ್ತಿದ್ದ ಗೆಳೆಯರಿಗೆ 'ಬರ್ತೀನ್ರಲೇ...' ಅಂದ. ಹೊರಟ.

ಅವನ ಪ್ರಪಂಚವಾಗಬೇಕಾಗಿದ್ದ ಓದು ವಿದ್ಯಾಭ್ಯಾಸ ಅಂದಿಗೆ ಪೂರ್ಣವಿರಾಮವನ್ನು ಪಡೆದುಕೊಂಡಿತ್ತು. 'ಇಲ್ಯಾಕೆ ಬಂದೆ... ಕೂದ್ಲು ಕೆದ್ರುಕಂಡು, ಹಳೆ ಸೀರೆನಾಗೆ ಬಂದು ನನ್ ಮಾನ ಕಳಿಯಾಕೆ' ಅಂತ ಉಕ್ಕಿಬಂದ ಸಿಟ್ಟನ್ನು ಅದುಮಿಟ್ಟುಕೊಂಡು ಶಾಲೆ ಮೆಟ್ಟಿಲಿಳಿದ. ಮತ್ತೆಂದೂ ಈ ಸಂಭ್ರಮದ ಸ್ಕೂಲು ತನ್ನ ಪಾಲಿಗೆ ಬಾರದು ಎಂದು ತಿಳಿಯಲು ಅವನಿಗೆ ಬಹಳ ಸಮಯ ಹಿಡಿಯಲಿಲ್ಲ.

'ನಿಮ್ಮಪ್ಪ ಎತ್ತಗೋ ಹೋಗ್ಬಿಟ್ಟಾನೆ.'

'ಹ್ಞಾಂ?' ಬಿರಬಿರನೆ ನಡೆಯುತ್ತ ಪಾಟಿಕೈಚೀಲ ಸರಿ ಮಾಡಿಕೊಳ್ಳುತ್ತ ಅಮ್ಮನ ಮುಖ ನೋಡಿದ. ಹಿಂದೆಂದಿಗಿಂತಲೂ ಭಿನ್ನವಾಗಿತ್ತು. ಇನ್ನಷ್ಟು ಸ್ಪಷ್ಟವಾಗಿ ಗಮನಿಸಿದ್ದರೆ ಬದುಕು ಇನ್ನಷ್ಟು ಪಾತಾಳಕ್ಕೆ ಇಳಿಯುತ್ತಿರುವ ಲಕ್ಷಣ ಗೋಚರಿಸುತ್ತಿತ್ತೇನೋ.

ಅಪ್ಪ ಮೂರ್ನಾಲ್ಕು ದಿನದಿಂದ ಕಾಣುತ್ತಿರಲಿಲ್ಲ. ಯಾವಾಗಲೂ ಆತ ಮನೆಯಲ್ಲಿ ಇರುತ್ತಿರಲಿಲ್ಲ. ಆದರೆ ಎಲ್ಲೋ ಹೋಗೇ ಬಿಟ್ಟಿದ್ದಾನೆ ಅಂತ ಇವಳಿಗೆ ಹೇಗೆ ಖಾತ್ರಿ ಆಯಿತೆಂದಷ್ಟೆ ಯೋಚಿಸುತ್ತಿದ್ದ... ಬದುಕಿನ ಭೀಕರತೆ ಅವನ ಅನುಭವಕ್ಕೆ ಬರಲು ವರ್ಷಗಳು ಬೇಕಾದವು. ಅಪ್ಪ ಬಹುತೇಕ ಮೌನವಾಗಿರುತ್ತಿದ್ದ. ಎಷ್ಟೊತ್ತಿಗೋ ಬಂದು ಎಷ್ಟೊತ್ತಿಗೋ ಹೋಗಿಬಿಡುತ್ತಿದ್ದ. ಸದಾ ಮರೆಯಲ್ಲಿರಲು, ಮರೆಯಾಗಲು ಇಷ್ಟಪಡುತ್ತಿದ್ದ. ಈಗ ಅವನು ಮಾಡಿದ್ದು ಅದೇ. ಅಂದಷ್ಟೇ ಅವನು ಅಂದುಕೊಂಡ. ಅವನದ್ದೊಂದು ಸ್ವತಂತ್ರ ಪಾತ್ರವೇ ಆಗದ ಹಾಗೆ ಅಮ್ಮ ರವಿಕಾಂತನ ಬಾಲ್ಯದಿಂದ ಆವರಿಸಿಬಿಟ್ಟಿದ್ದಳು. ಅಪ್ಪನ ನೆನಪೂ... ಆನಂತರವೆಲ್ಲ ಬದುಕುವ ಓಟದಲ್ಲಿನ ಭೀಕರ ಯಾತನೆ... ತನ್ನ ಅಮ್ಮ ಬದಲಾದ ಪರಿ ಅಚ್ಚರಿಗಿಂತ ಪ್ರಶ್ನೆಯಾಗಿ ಕಾಡತೊಡಗಿತ್ತವನಿಗೆ.

ಹಾಗೆ ಶಾಲೆಯಿಂದ ನೇರ ಬಸ್ಸಿಡಿದು ಅಪ್ಪನ ಹಳ್ಳಿಯೂರಿಗೆ ಹೋಗಿ, ಅವನು ನಿಜಕ್ಕೂ ಮನೆಬಿಟ್ಟ ಕಾರಣವನ್ನು ಒಂದೇ ಉಸಿರಿನಲ್ಲಿ ಹೇಳಿದವರಿಗೆ, ಕೇಳಿಸಿಕೊಂಡವರಿಂದ ಯಾವ ಅಚ್ಚರ್ಯದ ಪ್ರತಿಕ್ರಿಯೆಯೂ ಬರಲಿಲ್ಲ, ಕನಿಕರದ ನೋಟವೂ ದಕ್ಕಲಿಲ್ಲ. ಅಮ್ಮ ಆಸ್ತಿಗೆಂದು ಕುಂತಳು. ಇದ್ದರೆ